ಕರ್ನಾಟಕ ಸರ್ಕಾರ

**ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕೆ.ಆರ್. ವೃತ್ತ, ನೃಪತುಂಗರಸ್ತೆ, ಬೆಂಗಳೂರು-01**

ದೂರವಾಣಿ ಸಂಖ್ಯೆ:080 22271998 ಇ-ಮೇಲ್‌ವಿಳಾಸ: jd_mms@yahoo.co.in/mdmskarnataka@gmail.com

ಸಂಖ್ಯೆ: ಎಂ2/ಅ.ದಾ/ಆಹಾರ ಧಾನ್ಯ ವಿತರಣೆ//18/2020-21 ದಿನಾಂಕ: 24.12.2020

## -:ಸುತ್ತೋಲೆ:-

**ವಿಷಯ:** ಮಧ್ಯಾಹ್ನ ಉಪಹಾರ ಯೋಜನೆ ಕಾರ್ಯಕ್ರಮದಡಿ ವಿದ್ಯಾರ್ಥಿಗಳಿಗೆ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್-2020ರ ಮಾಹೆಯ ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ ಉಳಿದ 55 ದಿನಗಳಿಗೆ ಬಿಸಿಯೂಟದ ಬದಲಾಗಿ ಆಹಾರ ಭದ್ರತಾ ಭತ್ಯೆಯಂತೆ ಆಹಾರ ಧಾನ್ಯಗಳನ್ನು ವಿತರಣೆ ಮಾಡುವಕುರಿತು.

**ಉಲ್ಲೇಖ :**
1) ಎಂ.ಹೆಚ್.ಆರ್.ಡಿ. ಅರೆ ಸರ್ಕಾರಿ ಪತ್ರ ಸಂಖ್ಯೆ: 1-2/2020 Desk (MDM) Dated 21.08.2020
2) ಸರ್ಕಾರದ ಆದೇಶ ಸಂಖ್ಯೆ: ಇಪಿ 46 ಎಂಎಂಎಸ್ 2020 ಬೆಂಗಳೂರು, ದಿನಾಂಕ 03.11.2020
3) ಸರ್ಕಾರದ ಆದೇಶ ಸಂಖ್ಯೆ: ಇಪಿ 46 ಎಂಎಂಎಸ್ 2020 ಬೆಂಗಳೂರು, ದಿನಾಂಕ 05.12.2020
4) ಸರ್ಕಾರದ ತಿದ್ದುಪಡಿ ಮತ್ತು ಸೇರ್ಪಡೆ ಆದೇಶ ಸಂಖ್ಯೆ: ಇಪಿ 46 ಎಂಎಂಎಸ್ 2020 ಬೆಂಗಳೂರು, ದಿನಾಂಕ 15.12.2020
5) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾ. & ಪ್ರೌ. ಶಿಕ್ಷಣ (ಶಿಕ್ಷಣ ಇಲಾಖೆ), ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ನಡೆದ ದಿನಾಂಕ 21.12.2020ರಂದು ನಡೆದ ಸಭೆಯ ನಡಾವಳಿ.
6) ಈ ಕಚೇರಿ ಪತ್ರ ಸಂಖ್ಯೆ: ಎಂ2/ಅದಾ/ತೊ.ಬೇ.ಮ&ದೂ/04/2020 ದಿನಾಂಕ:23.12.2020

* * * * *

ಕೋವಿಡ್-19 ವೈರಾಣು ಸೋಂಕು ಹರಡದಂತೆ ತಡೆಗಟ್ಟುವ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ 2020-21ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಶಾಲೆಗಳು ಆರಂಭವಾಗದೇ ಇರುವುದರಿಂದ ವಿದ್ಯಾರ್ಥಿಗಳಿಗೆ ಅಗತ್ಯ ಪೌಷ್ಟಿಕಾಂಶವನ್ನು ಒದಗಿಸಲು ಮಧ್ಯಾಹ್ನ ಉಪಾಹಾರ ಯೋಜನೆಯಡಿ ಬಿಸಿಯೂಟದ ಬದಲಾಗಿ ಆಹಾರ ಭದ್ರತೆ ಕಾಯ್ದೆ-2013 ಮತ್ತು ಎಂ.ಹೆಚ್.ಆರ್.ಡಿ-ಎಂ.ಡಿ.ಎಂ ನಿಯಮಗಳು-2015 ಅನ್ವಯ ಆಹಾರ ಭದ್ರತೆ ಭತ್ಯೆಯನ್ನು ನೀಡುವಂತೆ ಉಲ್ಲೇಖ (1) ಪತ್ರದಲ್ಲಿ ಸೂಚಿಸಿದೆ. ಈ ಹಿನ್ನೆಲೆಯಲ್ಲಿ ಮಧ್ಯಾಹ್ನ ಉಪಹಾರ ಯೋಜನೆ ಕಾರ್ಯಕ್ರಮದಡಿ ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್-2020ರ ಮಾಹೆಯ ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ ಉಳಿದ 108 ದಿನಗಳಿಗೆ ಆಹಾರ ಭದ್ರತಾ ಕಾಯ್ದೆಯಡಿ ಆಹಾರ ಭದ್ರತಾ ಭತ್ಯೆಯಂತೆ ಬಿಸಿಯೂಟದ ಬದಲಾಗಿ ಆಹಾರ ಧಾನ್ಯಗಳನ್ನು ವಿತರಣೆ ಮಾಡಲು ಉಲ್ಲೇಖ (2)ರ ಆದೇಶದಲ್ಲಿ ಸೂಚಿಸಲಾಗಿದ್ದು, ಇದರಂತೆ ಈಗಾಗಲೇ ಜೂನ್-ಜುಲೈ-2020ರ ಮಾಹೆಗಳ 53 ದಿನಗಳಿಗೆ ನಿಗದಿತ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಶಾಲಾ ಮಕ್ಕಳಿಗೆ ವಿತರಿಸುವ ಕಾರ್ಯ ಪೂರ್ಣಗೊಂಡಿರುತ್ತದೆ.

ಪ್ರಸ್ತುತ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ದಿನಾಂಕ : 22.12.2020ರಂದು ಸಲ್ಲಿಸಿರುವ ಅಫಿಡವಿಟ್‌ನಂತೆ ಹಾಗೂ ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ನಿರ್ದೇಶನಕ್ಕೆ ಪೂರಕವಾಗಿ ಉಲ್ಲೇಖ (4) ಮತ್ತು (5) ರಲ್ಲಿರುವಂತೆ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್-2020ರ ಮಾಹೆಯ ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ ಉಳಿದ 55 ದಿನಗಳಿಗೆ ಆಹಾರ ಭದ್ರತಾ ಕಾಯ್ದೆಯಡಿ ಆಹಾರ ಭದ್ರತಾ ಭತ್ಯೆಯಂತೆ ಬಿಸಿಯೂಟದ ಬದಲಾಗಿ ಆಹಾರ ಧಾನ್ಯಗಳನ್ನು ವಿತರಣೆ

ಮಾಡಲು ಪರಿಷ್ಕರಣೆ ಮಾಡಿರುವ ಆದೇಶಗಳಿಗನುಗುಣವಾಗಿ ಆಹಾರ ಧಾನ್ಯಗಳಾದ ಅಕ್ಕಿ ಮತ್ತು ಗೋದಿಯೊಂದಿಗೆ, ಪ್ರತಿ ವಿದ್ಯಾರ್ಥಿಗೆ ನಿಗದಿಪಡಿಸಿರುವ ಪರಿವರ್ತನಾ ವೆಚ್ಚಕ್ಕೆ ಅನುಗುಣವಾಗಿ ತೊಗರಿಬೇಳೆಯೊಂದಿಗೆ ಒಂದು ಲೀಟರ್ ಖಾದ್ಯತೈಲ, ಒಂದು ಕೆ.ಜಿ. ಅಯೋಡಿಕರಿಸಿದ ಉಪ್ಪು ಇವುಗಳನ್ನು 1 ರಿಂದ 10ನೇ ತರಗತಿವರೆಗಿನ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ (ಶಾಲಾ ಅಡುಗೆ ಕೇಂದ್ರಗಳಿರುವ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಕೇಂದ್ರೀಕೃತ ಅಡುಗೆ ಕೇಂದ್ರಗಳಿಂದ ಪೂರೈಸುತ್ತಿರುವ) ವಿದ್ಯಾರ್ಥಿಗಳ ದಾಖಲಾತಿಗನುಗುಣವಾಗಿ ವಿತರಿಸಲು ಕೂಡಲೇ ಕ್ರಮವಹಿಸಲು ಕೆಳಕಂಡ ಕೋಷ್ಟಕದಂತೆ ಅಗತ್ಯ ಬೇಡಿಕೆಯನ್ನು ಜಿಲ್ಲಾವಾರು ಸಲ್ಲಿಸಲು ಉಲ್ಲೇಖ (06) ರಲ್ಲಿ ಈಗಾಗಲೇ ತಿಳಿಸಲಾಗಿದೆ.

ಇದರಂತೆ ಪ್ರತಿ ಜಿಲ್ಲೆಯಿಂದ ಸಲ್ಲಿಸಿರುವ ಬೇಡಿಕೆಗೆ ಅನುಗುಣವಾಗಿ ಕೆ.ಎಫ್.ಸಿ.ಎಸ್.ಸಿ. ಸಂಸ್ಥೆಯು ಆಹಾರ ಧಾನ್ಯಗಳ ಖರೀದಿ ಪ್ರಕ್ರಿಯೆ ತುರ್ತಾಗಿ ಪೂರ್ಣಗೊಳಿಸಿ ರಾಜ್ಯದ ಎಲ್ಲಾ ತಾಲ್ಲೂಕುಗಳ ಕೆ.ಎಫ್.ಸಿ.ಎಸ್.ಸಿ. ಗೋದಾಮುಗಳಿಗೆ ಸರಬರಾಜು ಮಾಡುವಂತೆ ಸೂಚಿಸಿದೆ. ಆಹಾರ ಧಾನ್ಯಗಳನ್ನು ತಾಲ್ಲೂಕು ಹಂತದಲ್ಲಿ ಸ್ವೀಕರಿಸುವ ಸಂದರ್ಭದಲ್ಲಿ ಆಹಾರ ಧಾನ್ಯಗಳ ಉತ್ತಮ ಗುಣಮಟ್ಟದ ಬಗ್ಗೆ ಜಿಲ್ಲಾ ಪರಿಶೀಲನಾ ಸಮಿತಿಯಿಂದ ಪರೀಕ್ಷಿಸಿ ಖಾತರಿಪಡಿಸಿಕೊಂಡು ಆಯಾ ತಾಲ್ಲೂಕುಗಳ ಅಕ್ಷರ ದಾಸೋಹ ಸಹಾಯಕ ನಿರ್ದೇಶಕರು ಕೂಡಲೇ ಶಾಲೆಗಳಿಗೆ ಎತ್ತುವಳಿ ಮಾಡಿ ದಿನಾಂಕ 15.01.2021ರೊಳಗೆ ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ದಾಖಲಾತಿಗನುಗುಣವಾಗಿ ವಿತರಣಾ ಕಾರ್ಯ ಪೂರ್ಣಗೊಳಿಸುವಂತೆ ಸೂಚಿಸಿದೆ.

## ಕೋಷ್ಟಕ

| ಹಂತ | ಮಾಹೆ | ಆಹಾರ ಭದ್ರತಾ ಭತ್ಯೆ ವಿತರಿಸಬೇಕಾದ ದಿನಗಳು | ತರಗತಿ | ಒಂದು ಮಗುವಿನ ಅಡುಗೆ ತಯಾರಿಕಾ ವೆಚ್ಚ/ ಪರಿವರ್ತನಾ ವೆಚ್ಚ (ರೂ.ಗಳಲ್ಲಿ) | ಕಾಲಂ 3ರಲ್ಲಿ ವಿತರಿಸಲು ನಿಗದಿಪಡಿಸಿರುವ ಒಟ್ಟು ದಿನಗಳ ಅಡುಗೆ ತಯಾರಿಕಾ ವೆಚ್ಚದ ಮೊತ್ತ (ರೂ.ಗಳಲ್ಲಿ) | ಒಂದು ಮಗುವಿಗೆ ಕಾಲಂ 3ರಲ್ಲಿ ವಿತರಿಸಲು ನಿಗದಿಪಡಿಸಿರುವ ಒಟ್ಟು 55 ದಿನಗಳಿಗೆ ವಿತರಿಸಬೇಕಾಗಿರುವ ಆಹಾರ ಪದಾರ್ಥಗಳ ಅಂದಾಜು ಪ್ರಮಾಣ (ಬ್ಯಾಕ್‌ಲಾಗ್ ಅವಧಿಯಲ್ಲಿನ ಆಹಾರ ಪದಾರ್ಥಗಳ ದರಗಳ ಆಧಾರದ ಮೇರೆಗೆ) | | |
|---|---|---|---|---|---|---|---|---|
| | | | | | | ತೊಗರಿಬೇಳೆ | ಖಾದ್ಯತೈಲ (ಸೂರ್ಯಕಾಂತಿ ಎಣ್ಣೆ) | ಅಯೋಡೀಕರಿಸಿದ ಉಪ್ಪು |
| 1ನೇ | ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ 2020 | 55 | 1 to 5th | 4.97 | 273.35 | 1 kg. 809 gm. | 1 ltr. | 1 kg. |
| | | | 6to 8th | 7.45 | 409.75 | 3 kg. 397 gm. | 1 ltr. | 1 kg. |
| | | | 9 to 10th | 7.45 | 409.75 | 3 kg. 397 gm. | 1 ltr. | 1 kg. |

ಮಾನ್ಯ ಉಚ್ಚ ನ್ಯಾಯಾಲಯವು ಆಗಸ್ಟ್ ತಿಂಗಳಲ್ಲಿ ಇದ್ದ ದರಗಳ ಆಧಾರಗಳ ಮೇಲೆ ಆಹಾರ ಧಾನ್ಯಗಳ ಪ್ರಮಾಣವನ್ನು ನಿರ್ಧರಿಸಿ ವಿತರಿಸಲು ತಿಳಿಸಿರುವುದರಿಂದ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್-2020ರ ಮಾಹೆಗಳ ಆಹಾರ ಹಂಚಿಕೆಗೆ ಸಂಬಂಧಿಸಿದಂತೆ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವ ಪ್ರಮಾಣಗಳಲ್ಲಿ ವಿವಿಧ ಆಹಾರ ಪದಾರ್ಥಗಳನ್ನು ವಿತರಿಸಲು ಆದೇಶಿಸಿದೆ. ಇದಕ್ಕೆ ತಗುಲುವ ಹೆಚ್ಚುವರಿ ಮೊತ್ತವನ್ನು ಮಧ್ಯಾಹ್ನ ಉಪಾಹಾರ ಯೋಜನೆಯ ಲೆಕ್ಕ ಶೀರ್ಷಿಕೆ:2202-00-101-0-18 ರಡಿ ಲಭ್ಯವಿರುವ ಅನುದಾನದಿಂದ ಭರಿಸಲು ತಿಳಿಸಿದೆ. (ಸರ್ಕಾರದ ಆದೇಶ ಸಂಖ್ಯೆ: ಇಪಿ 46 ಎಂಎಂಎಸ್ 2020 ಬೆಂಗಳೂರು, ದಿನಾಂಕ 15.12.2020)

ಈ ಕೆಳಕಂಡ ಮಾರ್ಗಸೂಚಿಯಂತೆ ಶಾಲಾ ಮುಖ್ಯಸ್ಥರು ವಿದ್ಯಾರ್ಥಿಗಳಿಗೆ ವಿತರಣೆ ಮಾಡಲು ಅಗತ್ಯ ಕ್ರಮವನ್ನು ಪಾಲಿಸಲು ಸೂಚಿಸಿದೆ :

1. ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್–2020ರ 55 ದಿನಗಳ ಅವಧಿಗೆ ಪ್ರತಿ ವಿದ್ಯಾರ್ಥಿಗೆ ಆಹಾರ ಧಾನ್ಯಗಳಾದ ಅಕ್ಕಿ ಮತ್ತು ಗೋದಿ ಇದರೊಂದಿಗೆ ಪರಿವರ್ತನಾ ವೆಚ್ಚದ ಬದಲಿಗೆ ತೊಗರಿಬೇಳೆ, 1 ಲೀ. ಖಾದ್ಯತೈಲ ಮತ್ತು 1 ಕೆ.ಜಿ. ಅಯೋಡೀಕರಿಸಿದ ಉಪ್ಪು ಇವುಗಳನ್ನು ಮೇಲ್ಕಂಡ ಕೋಷ್ಟಕದಲ್ಲಿ ತಿಳಿಸಿರುವ ಪ್ರಮಾಣದಲ್ಲಿ ವಿತರಿಸುವುದು.
2. ಉಲ್ಲೇಖ (02)ರ ಆದೇಶದಲ್ಲಿ ಬಿಡುಗಡೆಯಾಗಿರುವ ಅನುದಾನವನ್ನು ಪ್ರಥಮ ಆದ್ಯತೆಯ ಮೇರೆಗೆ ಆಹಾರ ಧಾನ್ಯಗಳ ವೆಚ್ಚ, ಅಡುಗೆ ತಯಾರಿಕೆ ವೆಚ್ಚ (ತೊಗರಿಬೇಳೆ, ಅಡುಗೆಎಣ್ಣೆ, ಅಯೋಡೀಕರಿಸಿದ ಉಪ್ಪು ಖರೀದಿಸಲು), ಸಾಗಾಣಿಕಾ ವೆಚ್ಚ ಮತ್ತು ಕೆ.ಎಫ್.ಸಿ.ಎಸ್.ಸಿ. ಸಂಸ್ಥೆಗೆ ಪಾವತಿಸಲಾಗುವ ಸೇವಾ ಶುಲ್ಕದ ವೆಚ್ಚಗಳನ್ನು ಭರಿಸಲು ಉಪಯೋಗಿಸತಕ್ಕದ್ದು.
3. 1 ರಿಂದ 8ನೇ ತರಗತಿ ಮಕ್ಕಳಿಗೆ ಆಹಾರ ಧಾನ್ಯಗಳನ್ನು ವಿತರಿಸುವಾಗ ಒಟ್ಟು 55 ದಿನಗಳಲ್ಲಿ 47 ದಿನಗಳಿಗೆ ಅಕ್ಕಿ (ಎಫ್.ಸಿ.ಐ. ನಿಂದ ವಿತರಿಸಿರುವ) ಮತ್ತು 8 ದಿನಗಳಿಗೆ ಗೋದಿಯನ್ನು(ಎಫ್.ಸಿ.ಐ. ನಿಂದ ವಿತರಿಸಿರುವ) ಮತ್ತು 9 ಮತ್ತು 10ನೇ ತರಗತಿ ಮಕ್ಕಳಿಗೆ 55 ದಿನಗಳಿಗೂ ಸಾಮಾನ್ಯ ಅಕ್ಕಿಯನ್ನು (ಕೆ.ಎಫ್.ಸಿ.ಎಸ್.ಸಿ.ಯಿಂದ ಖರೀದಿಸಿರುವ) ಮೇಲ್ಕಂಡ ಕೋಷ್ಟಕದಲ್ಲಿ ತಿಳಿಸಿರುವಂತೆ ವಿತರಿಸುವುದು.
4. ಪ್ರತಿ ವಿದ್ಯಾರ್ಥಿಗೆ ವಿತರಣೆ ಮಾಡುವ ಆಹಾರ ಧಾನ್ಯಗಳು ಮತ್ತು ಪ್ರಮಾಣದ ಬಗ್ಗೆ ಸಾರ್ವಜನಿಕರ ಗಮನಕ್ಕಾಗಿ ಶಾಲಾ ಸೂಚನಾ ಫಲಕದಲ್ಲಿ ನಮೂದಿಸಿ ಸೂಕ್ತ ಸ್ಥಳದಲ್ಲಿ ಪ್ರದರ್ಶಿಸಬೇಕು ಹಾಗೂ ಸೂಕ್ತ ವಿಧಾನಗಳ ಮೂಲಕ ಸ್ಥಳೀಯವಾಗಿ ಪೋಷಕರಿಗೆ ಆಹಾರ ಧಾನ್ಯ ವಿತರಣೆಯ ಬಗ್ಗೆ ಮಾಹಿತಿ ತಲುಪುವಂತೆ ಕ್ರಮವಹಿಸುವುದು.
5. ಶಾಲೆಯ ಎಲ್ಲಾ ಮಕ್ಕಳು / ಪೋಷಕರನ್ನು ಒಂದೇ ಬಾರಿಗೆ ಶಾಲೆಗೆ ಕರೆಸದೇ ಸೀಮಿತ ಸಂಖ್ಯೆಯಲ್ಲಿ ಕರೆಯಿಸಿ ಕೋವಿಡ್–19 ಸುರಕ್ಷತಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಿಕೊಂಡು ಹಾಗೂ ಸಾಮಾಜಿಕ ಅಂತರ ಕಾಯ್ದುಕೊಂಡು ಆಹಾರ ಸಾಮಗ್ರಿಗಳನ್ನು ಹಂತ ಹಂತವಾಗಿ ವಿತರಿಸುವುದು.
6. ಶಾಲಾ ಮುಖ್ಯಸ್ಥರು, ಎಸ್.ಡಿ.ಎಂ.ಸಿ.ಸದಸ್ಯರು ಮತ್ತು ತಾಯಂದಿರ ಸಮಿತಿ ಸದಸ್ಯರು ವಿದ್ಯಾರ್ಥಿಗಳಿಗೆ ವಿತರಿಸಲಾಗುವ ಆಹಾರ ಧಾನ್ಯಗಳು ಉತ್ತಮ ಗುಣಮಟ್ಟದಲ್ಲಿರುವುದನ್ನು ಖಚಿತಪಡಿಸಿಕೊಳ್ಳುವುದು.
7. ಸ್ವಯಂ ಸೇವಾ ಸಂಸ್ಥೆಗಳಿಂದ ಬಿಸಿಯೂಟ ಸರಬರಾಜಾಗುತ್ತಿರುವ ಶಾಲೆಗಳಿಗೆ ಸಂಬಂಧಿಸಿದ ಸ್ವಯಂ ಸೇವಾ ಸಂಸ್ಥೆಗಳೇ ಖುದ್ದಾಗಿ ಮಕ್ಕಳ ಸಂಖ್ಯೆಗನುಗುಣವಾಗಿ ಸದರಿ ಶಾಲೆಗಳಿಗೆ ಆಹಾರಧಾನ್ಯ (ಅಕ್ಕಿ ಮತ್ತು ಗೋದಿ) ಮತ್ತು ಪರಿವರ್ತನಾ ವೆಚ್ಚಕ್ಕೆ ಬದಲಾಗಿ ಕೋಷ್ಟಕದಲ್ಲಿರುವಂತೆ ತೊಗರಿಬೇಳೆ, ಅಡುಗೆಎಣ್ಣೆ ಮತ್ತು ಅಯೋಡೀಕರಿಸಿದ ಉಪ್ಪು ಇವುಗಳನ್ನು ಖರೀದಿಸಿ ವಿತರಣೆ ಮಾಡುವುದು. ಖರೀದಿಸಿದ ಆಹಾರ ಧಾನ್ಯಗಳ ಬಿಲ್ಲುಗಳನ್ನು ಕೂಡಲೇ ಸಲ್ಲಿಸಿ, ಬಿಡುಗಡೆಗೊಳಿಸಿದ ಪರಿವರ್ತನಾ ವೆಚ್ಚದ ಅನುದಾನದಲ್ಲಿ ಹಣ ಪಾವತಿ ಪಡೆಯುವುದು.
8. COVID-19 ವೈರಾಣು ಸೋಂಕು ತಡೆಗಟ್ಟುವ ಹಿನ್ನೆಲೆಯಲ್ಲಿ ಎಲ್ಲಾ ಅಗತ್ಯ ಮುನ್ನೆಚ್ಚರಿಕೆಯನ್ನು ತೆಗೆದುಕೊಂಡು, ಆಹಾರ ಸಾಮಗ್ರಿಗಳನ್ನು ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರು ಸಹ ಶಿಕ್ಷಕರ ಸಹಕಾರದೊಂದಿಗೆ ಮಕ್ಕಳು/ಮಕ್ಕಳ ಪೋಷಕರಿಗೆ ವಿತರಿಸುವುದು. ಆಹಾರಧಾನ್ಯ ವಿತರಿಸುವ ಸಿಬ್ಬಂದಿಗಳು ಮತ್ತು ಸ್ವೀಕರಿಸಲು ಬರುವ ಮಕ್ಕಳು/ಪೋಷಕರು ಕಡ್ಡಾಯವಾಗಿ ಮಾಸ್ಕ್ ಧರಿಸಿರಬೇಕು ಹಾಗೂ ಸ್ಯಾನಿಟೈಜರ್ ಬಳಸಬೇಕು. ಸಾಲಾಗಿ ನಿಲ್ಲುವಾಗ ಕನಿಷ್ಟ 06 ಅಡಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವಂತೆ ನೋಡಿಕೊಳ್ಳಬೇಕು. ಮಕ್ಕಳು/ಪೋಷಕರ ಘನತೆಗೆ ಧಕ್ಕೆ ಬಾರದಂತೆ ಕಾಳಜಿಯೊಂದಿಗೆ ಸಹಕರಿಸಿ ಸೂಕ್ತ ಕ್ರಮದಲ್ಲಿ ಯಾವುದೇ ಗೊಂದಲಗಳಿಗೆ ಅವಕಾಶ ಮಾಡಿಕೊಡದೇ ವಿತರಿಸುವುದು. ವಿತರಣೆ ಮಾಡಿದ ನಂತರ ಪೋಷಕರು/ಮಕ್ಕಳಿಂದ ಸಹಿ ಪಡೆದು ದಾಖಲೆ ವಹಿ (Distribution RecieptRegister) ಯನ್ನು ಶಾಲಾ ಹಂತದಲಿe ಕಡ್ಡಾಯವಾಗಿ ನಿರ್ವಹಣೆ ಮಾಡುವುದು.

9. ಆಹಾರ ಧಾನ್ಯಗಳ ವಿತರಣೆಯನ್ನು ಶಾಲಾ ಸಮಯದಲ್ಲಿ ಮಾತ್ರ ವಿತರಿಸುವುದು. ಶಾಲೆಯಲ್ಲಿ ಆಹಾರ ಧಾನ್ಯಗಳ ವಿತರಣೆ ಮಾಡುತ್ತಿರುವ ಕುರಿತು ಶಾಲಾಭಿವೃದ್ಧಿ ಸಮಿತಿ ಸದಸ್ಯರ ಮೂಲಕ ಪೋಷಕರಿಗೆ ಸಕಾಲದಲ್ಲಿ ಮಾಹಿತಿಯನ್ನು ನೀಡಲು ಕ್ರಮವಹಿಸುವುದು.
10. ಆಹಾರ ಧಾನ್ಯಗಳ ವಿತರಣೆಯ ಸಂದರ್ಭದಲ್ಲಿ ಶಾಲಾಭಿವೃದ್ಧಿ ಸಮಿತಿ ಸದಸ್ಯರು ಆಹಾರ ಧಾನ್ಯಗಳ ವಿತರಣೆ ಪ್ರಮಾಣವನ್ನು ಪರಿಶೀಲಿಸಲು ತಪ್ಪದೇ ಉಪಸ್ಥಿತರಿರುವಂತೆ ನೋಡಿಕೊಳ್ಳುವುದು.
11. ಆಹಾರ ಧಾನ್ಯಗಳ ವಿತರಣಾ ಕಾರ್ಯಕ್ಕೆ ಅಡುಗೆ ಸಿಬ್ಬಂದಿಯ ಸೇವೆಯನ್ನು ಬಳಸಿಕೊಳ್ಳುವುದು.
12. ವಿದ್ಯಾರ್ಥಿಗಳಿಗೆ ವಿತರಿಸುವ ಆಹಾರ ಧಾನ್ಯಗಳ ಪ್ರಮಾಣದಲ್ಲಿ ಹಾಗೂ ಗುಣಮಟ್ಟದಲ್ಲಿ ಯಾವುದೇ ವ್ಯತ್ಯಯವಾಗದಂತೆ ನೋಡಿಕೊಳ್ಳುವುದು.

**ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳು :**

1. ರಾಜ್ಯದಲ್ಲಿ COVID-19 ವೈರಾಣು ಸೋಂಕಿನ ಹಿನ್ನೆಲೆಯಲ್ಲಿ ಆರ್ಥಿಕ ಇಲಾಖೆ ಮಿತವ್ಯಯ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
2. ಉಲ್ಲೇಖ (02) ರ ಆದೇಶದಲ್ಲಿ ಬಿಡುಗಡೆಯಾದ ಅನುದಾನಕ್ಕೆ ಸಂಬಂಧಿಸಿದ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಮುಖ್ಯ ಲೆಕ್ಕಾಧಿಕಾರಿಗಳು ಸೂಕ್ತ ಲೆಕ್ಕ ಪತ್ರವನ್ನು ಇಡತಕ್ಕದ್ದು.
3. ಸದರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಆರ್ಥಿಕ ಮತ್ತು ಭೌತಿಕ ಗುರಿಗಳು ಹಾಗೂ ಭರಿಸಲಾದ ವೆಚ್ಚದ ವಿವರಗಳನ್ನು ಪ್ರತಿ ಮಾಹೆ ಅವಲೋಕನ (New Decision Support System) ತಂತ್ರಾಂಶದಲ್ಲಿ ಇಂದೀಕರಿಸುವುದು.
4. ಪ್ರತಿ ತಾಲ್ಲೂಕಿನ ಮೇಲ್ವಿಚಾರಣಾ ಸಿಬ್ಬಂದಿಗಳು (ಸಿ.ಆರ್.ಪಿ., ಬಿ.ಆರ್.ಪಿ. ಮತ್ತು ಇ.ಸಿ.ಒ) ಶಾಲೆಗಳಲ್ಲಿ ಆಹಾರ ಧಾನ್ಯ ವಿತರಣೆ ಶಾಲಾ ಮಕ್ಕಳಿಗೆ ದಾಖಲಾತಿಗನುಗುಣವಾಗಿ ಶೇ. 100ರಷ್ಟು ಆಗುತ್ತಿರುವ ಬಗ್ಗೆ ಆಗಿಂದಾಗ್ಗೆ ಖಾತ್ರಿಪಡಿಸಿಕೊಳ್ಳುವುದು.
5. ವಿದ್ಯಾರ್ಥಿಗಳಿಗೆ ಆಹಾರಧಾನ್ಯ ವಿತರಣೆಯ ದೈನಂದಿನ ಪ್ರಗತಿ ಮಾಹಿತಿಯನ್ನುSATS-MDM ವೆಬ್‌ಸೈಟ್ ಪೋರ್ಟಲ್‌ನಲ್ಲಿ ಶಾಲಾ ಮುಖ್ಯಸ್ಥರು ತಪ್ಪದೇ ದಾಖಲಿಸುವುದು. ಶಾಲಾವಾರು ವಿತರಣಾ ಪ್ರಗತಿ ಮಾಹಿತಿ SATS-MDM ವೆಬ್‌ಸೈಟ್ ಪೋರ್ಟಲ್‌ನಲ್ಲಿ ಶಾಲಾ ಮುಖ್ಯಸ್ಥರು ಅಪ್‌ಲೋಡ್ ಮಾಡಿರುವ ಸಂಬಂಧಿಸಿದ ತಾಲ್ಲೂಕಿನ ಸಹಾಯಕ ನಿರ್ದೇಶಕರು (ಅಕ್ಷರದಾಸೋಹ) ಮತ್ತು ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ ಇವರು ಪ್ರತಿ ದಿನ ಪರಿಶೀಲಿಸಿ ಖಾತ್ರಿಪಡಿಸಿಕೊಳ್ಳುವುದು.
6. ಆಹಾರಧಾನ್ಯ ವಿತರಣೆಯ ಸಂದರ್ಭದಲ್ಲಿ ಅನುಸರಿಸಿದ ಅತ್ಯುತ್ತಮ ಆಚರಣೆಗೆ (Best Practices) ಸಂಬಂಧಿಸಿದಂತೆ ಪ್ರತಿ ಜಿಲ್ಲೆಯಿಂದ ಒಂದು 5 ರಿಂದ 7 ನಿಮಿಷಗಳ ವಿಡಿಯೋ ಡಾಕ್ಯೂಮೆಂಟರಿ ಮತ್ತು ಅತ್ಯುತ್ತಮವಾದ 5 ಛಾಯಾಚಿತ್ರಗಳನ್ನು SATS-MDM ವೆಬ್‌ಸೈಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು ಮತ್ತು jd_mms@yahoo.co.in/mdmskarnataka@gmail.com ಇ–ಮೇಲ್ ವಿಳಾಸಕ್ಕೂ ರವಾನಿಸುವುದು.
7. ಜೂನ್ ನಿಂದ ಅಕ್ಟೋಬರ್ 2020ರ ವರೆಗೆ ಆಹಾರ ಧಾನ್ಯಗಳ ವಿತರಣೆಗೆ ಅಗತ್ಯವಿರುವ ಅನುದಾನವನ್ನು ಸರ್ಕಾರದಿಂದ ಈಗಾಗಲೇ ಜಿಲ್ಲೆಗಳಿಗೆ ಬಿಡುಗಡೆಯಾಗಿದ್ದು, ಈ ಅವಧಿಯ ಆಹಾರ ಧಾನ್ಯಗಳ ವಿತರಣೆ ಪೂರ್ಣಗೊಳಿಸಿದ ಎಫ್.ಸಿ.ಐ., ಕೆ.ಎಫ್.ಸಿ.ಎಸ್.ಸಿ. ಮತ್ತು ಸ್ವಯಂ ಸೇವಾ ಸಂಸ್ಥೆಗಳ ಬಿಲ್ಲುಗಳಿಗೆ ಹಣ ಪಾವತಿ ಮಾಡುವ ಕ್ರಮವನ್ನು ಜನವರಿ 2021ರ ಅಂತ್ಯದೊಳಗೆ ಆಯಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್‌ರವರು ಜರೂರಾಗಿ ನಿಯಮಾನುಸಾರ ಪಾವತಿಸಲು ಮತ್ತು ಖುದ್ದು ವೈಯಕ್ತಿಕ ಗಮನಹರಿಸಿ ಸದರಿ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ನಿಗದಿತ ಕಾಲಮಿತಿಯೊಳಗೆ ಅನುಷ್ಠಾನ ಮಾಡಲು ಸೂಚಿಸಿದೆ.

8. ತಾಲ್ಲೂಕು ಕೆ.ಎಫ್.ಸಿ.ಎಸ್.ಸಿ. ಗೋದಾಮುಗಳಿಗೆ ಸರಬರಾಜು ಮಾಡಲಾದ ಆಹಾರ ಧಾನ್ಯಗಳನ್ನು ಶಾಲೆಗಳಿಗೆ ಎತ್ತುವಳಿ ಮಾಡುವ ಮೊದಲು ಪ್ರತಿ ಜಿಲ್ಲೆಯಿಂದ ಜಿಲ್ಲಾ ಹಂತದಲ್ಲಿ ಆಹಾರ ಧಾನ್ಯಗಳ ಮಾದರಿಯನ್ನು ಸಂಗ್ರಹಿಸಿಡುವುದು ಮತ್ತು ಅದೇ ಮಾದರಿಯನ್ನು ರಾಜ್ಯ ಕಚೇರಿಗೂ ಕಡ್ಡಾಯವಾಗಿ ರವಾನಿಸುವುದು.

ಈ ಕಾರ್ಯಕ್ರಮವನ್ನು ಅತೀ ಶೀಘ್ರದಲ್ಲಿ **ದಿನಾಂಕ :15.01.2021ರೊಳಗೆ ಪೂರ್ಣ ಪ್ರಮಾಣದಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ವಿತರಿಸಿ** ಕಾರ್ಯ ಪೂರ್ಣಗೊಳಿಸುವ ಸಂಬಂಧ ಶಿಕ್ಷಣ ಇಲಾಖೆಯ ಜಿಲ್ಲಾ ನೋಡಲ್ ಅಧಿಕಾರಿಗಳು, ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ), ಶಿಕ್ಷಣಾಧಿಕಾರಿಗಳು (ಅಕ್ಷರದಾಸೋಹ), ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಸಹಾಯಕ ನಿರ್ದೇಶಕರು (ಅಕ್ಷರದಾಸೋಹ), ರವರು ಸಂಪೂರ್ಣ ಜವಾಬ್ದಾರರಾಗಿದ್ದು, ತ್ವರಿತವಾಗಿ ಮೇಲ್ವಿಚಾರಣೆ ಮಾಡಿ ಪೂರ್ಣಗೊಳಿಸಿ ವರದಿ ಮಾಡುವಂತೆ ಈ ಮೂಲಕ ಸೂಚಿಸಿದೆ.

**(ವಿ.ಅನ್ಬುಕುಮಾರ್ಭಾ.ಆ.ಸೇ.)**
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

**ಸೂಕ್ತ ಕ್ರಮಕ್ಕಾಗಿ :**

1. ರಾಜ್ಯದ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಸಾ.ಶಿ.ಇ.,ರವರಿಗೆ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಶಿಕ್ಷಣಾಧಿಕಾರಿಗಳು (ಅಕ್ಷರದಾಸೋಹ), ಜಿಲ್ಲಾ ಪಂಚಾಯತ್ ಕಾರ್ಯಾಲಯ, ರವರಿಗೆ ಸೂಕ್ತ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು,ಸಾ.ಶಿ.ಇ.,ರವರಿಗೆ ಸೂಕ್ತ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ತಾಲ್ಲೂಕು ಸಹಾಯಕ ನಿರ್ದೇಶಕರು (ಅಕ್ಷರದಾಸೋಹ), ತಾಲ್ಲೂಕು ಪಂಚಾಯತ್ ಕಾರ್ಯಾಲಯ, ರವರಿಗೆ ಸೂಕ್ತ ಕ್ರಮಕ್ಕಾಗಿ.

**ಪ್ರತಿ:**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಕಟ್ಟಡ, ಬೆಂಗಳೂರು-01 ಗೌರವಗಳೊಂದಿಗೆ ಸಲ್ಲಿಸಿದೆ.
2. ಅಧ್ಯಕ್ಷರು, ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಫ್.ಸಿ.ಎಸ್.ಸಿ., ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್‌ರವರಿಗೆ ಮಾಹಿತಿಗಾಗಿ.
5. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್‌ರವರಿಗೆ ಮಾಹಿತಿಗಾಗಿ.
6. ಕಛೇರಿಪ್ರತಿ.